# ಅಭಿವ್ಯಕ್ತಿಯ ಹಲವು ಧಾರೆಗಳು

ಜೀವನ ಮತ್ತು ಇತಿಹಾಸವನ್ನು ಕುರಿತು ವ್ಯಾಖ್ಯಾನಿಸುವ, ಅವುಗಳೊಂದಿಗೆ ಸಂವಾದಿಸುವ ಮನುಷ್ಯನ ತುಡಿತ ಕೇವಲ ಭಾಷೆಯನ್ನು ಮಾತ್ರವಲ್ಲ, ಇನ್ನಿತರ ಕಲಾಪ್ರಕಾರಗಳನ್ನು ಬಳಸಿಕೊಳ್ಳುತ್ತದಲ್ಲವೇ? ಆ ತುಡಿತವೇ ಹೊಸ ಬಗೆಯ ಅಭಿವ್ಯಕ್ತಿಗಳಿಗೆ, ಹೊಸ ಮಾಧ್ಯಮಗಳ ಅನ್ವೇಷಣೆಗೆ ದಾರಿಯಾಯಿತಲ್ಲವೇ? ಆದಿಮ ಸ್ಥಿತಿಯಿಂದ ಆಧುನಿಕತೆಯವರೆಗೆ ನಾಗರಿಕತೆಯ ಉದ್ದಕ್ಕೂ ದೃಶ್ಯಕಲೆ ಮನುಷ್ಯನಿಗೆ ಮಾಧ್ಯಮವಾದ ರೀತಿಯೇ ಒಂದು ರೋಮಾಂಚಕ ಕಥೆ. ಹಾಗೆ ದೃಶ್ಯಕಲೆ ಎಂದಿನಿಂದಲೂ ಕಾಲದ ಜೊತೆ ಹೆಜ್ಜೆ ಹಾಕಿದೆ. ಒಂದು ಪ್ರದೇಶದ ಅಥವಾ ಒಂದು ಕಾಲಘಟ್ಟದ ಇತಿಹಾಸವನ್ನು ಕಟ್ಟುವಾಗ ಬೇರೆ ಮೂಲಗಳು ಹೇಳದ ವಿವರಗಳನ್ನು ದೃಶ್ಯಕಲೆ ಹೇಳಿದೆ.



ಆಧುನಿಕ ದೃಶ್ಯಕಲೆ ಹಿಂದಿನದನ್ನೂ ಇಂದಿನದನ್ನೂ ಹೇಳುತ್ತಲೇ ಇರಬೇಕು, ಹಳೆಯದನ್ನು ಬಿಡದೆ ಹೊಸತಿಗೆ ಸ್ಪಂದಿಸುತ್ತಿರಬೇಕು ಎಂಬುದಕ್ಕೆ ನಮ್ಮ ನಡುವೆ ಹಲವು ಉದಾಹರಣೆಗಳಿವೆ. ಅಂಥ ಪ್ರಯೋಗಗಳನ್ನು ಮಾಡುತ್ತಲೇ ಪ್ರತೀಕವಾಗಿ ನಿಂತವರು ಕಲಾಗುರು ಕೆ.ಜಿ. ಸುಬ್ರಹ್ಮಣ್ಯನ್. ದೃಶ್ಯಕಲೆಯ ಹಲವು ಪ್ರಕಾರಗಳಲ್ಲಿ ವೈವಿಧ್ಯಮಯ ಕೆಲಸ ಮಾಡಿರುವ ಅವರು, ತಮ್ಮ ಬೆನ್ನ ಹಿಂದಿನ ಬೆಳಕು ಕೊಟ್ಟ ಚೌಕಟ್ಟಿನಲ್ಲಿ ಕಣ್ಣೆದುರಿನ ವಾಸ್ತವಗಳನ್ನು ವ್ಯಾಖ್ಯಾನಿಸಿದವರು. ಅವರ ಒಂದು ಕಲಾಕೃತಿ 'ಮಯೂರ'ದ ಈ ಸಂಚಿಕೆಯ ಮುಖಪುಟವನ್ನು ಅಲಂಕರಿಸಿದೆ.

ಆರಂಭದಿಂದಲೂ ಚಿತ್ರಕಲೆಯ ಸಕಲ ಪ್ರಯೋಗಗಳಿಗೆ ವೇದಿಕೆಯಾಗಿರುವ 'ಮಯೂರ' ಮಾಸಪತ್ರಿಕೆ, ದೃಶ್ಯಕಲೆಯ ಇನ್ನಿತರ ಸಾಧ್ಯತೆಗಳನ್ನು ಪರಿಚಯಿಸಲು ಹಲವು ಪ್ರಯತ್ನಗಳನ್ನು ಮಾಡುತ್ತಿದೆ. ಸಂಗೀತಕಲೆಯ, ದೃಶ್ಯಕಲೆಯ ಇತಿಹಾಸ ಮತ್ತು ರಸಗ್ರಹಣವನ್ನು ಸಾಮಾನ್ಯ ಓದುಗರಿಗೆ ತಿಳಿಸಲು ಕಲಾವಿಮರ್ಶಕರಿಂದ ಅಂಕಣಗಳನ್ನು ಬರೆಸುತ್ತಿದೆ. ಇದಕ್ಕೆ ಸಿಗುತ್ತಿರುವ ಓದುಗರ ಸ್ಪಂದನವೇ ಅದರ ಅಗತ್ಯ ಮತ್ತು ಔಚಿತ್ಯಕ್ಕೆ ಪ್ರಮಾಣಪತ್ರ ಎಂಬುದು ನಮ್ಮ ನಂಬಿಕೆ.

**–ಆರ್. ಪೂರ್ಣಿಮಾ**